# ಏನು ಮರುಳಾದೆಮ್ಮ ಎಲೆ ರುಕ್ಮಿಣಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 137.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 287.
3. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 105.
4. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 are same as in Ref. 1 except few minor differences which are not considered here.
5. **Note:** Singer has followed these lyrics.
6. **Note:** Ankita is different in Ref. 1 and Ref. 3. We have considered Ref.1 as standard and taken that Ankita for listing.

ರಾಗ: ಕಾಂಭೋಜ ತಾಳ: ಝಂಪೆ

ಏನು ಮರುಳಾದ್ಯಮ್ಮ ಎಲೆ ರುಕ್ಮಿಣಿ || ಪ ||
ಹೀನ ಕುಲ ಗೊಲ್ಲ ಶ್ರೀ ಗೋಪಾಲಕೃಷ್ಣನಿಗೆ || ಅಪ ||

ಹಾಸಿಕಿಲ್ಲದೆ ಹಾವಿನ ಮೇಲೆ ಒರಗಿದವ
ಹೇಸಿಕಿಲ್ಲದೆ ಕರಡಿಯ ಕೂಡಿದ
ಗ್ರಾಸಕಿಲ್ಲದೆ ತೊತ್ತಿನ ಮಗನ ಮನೆಲುಂಡ
ದೋಷಕಂಜದೆ ಮಾವನ ಶಿರವ ತರಿದವಗೆ || 1 ||

ಕುಂಡ ಗೋಳಕರ ಮನೆ ಕುಲ ದೈವನೆನಿಸಿದಗೆ
ಮಂಡೆ ಬೋಳರ ಮನಕೆ ಮನೆ ದೈವವ
ಹಿಂಡು ಗೊಲ್ಲರ ಮನೆಯ ಹಿರಿಯನೆಂದೆನಿಸುವ
ಭಂಡಾಟದ ಗೊಲ್ಲ ಈ ಬಳಗದೊಳಗೆಲ್ಲ || 2 ||

ಒಬ್ಬರಲಿ ಹುಟ್ಟಿ ಒಬ್ಬರಲಿ ಬೆಳೆದ

ಒಬ್ಬರಿಗೆ ಮಗನಲ್ಲ ಜಗದೊಳಗೆಲ್ಲ
ಅಬ್ಬರದ ದೈವ ಶ್ರೀ ಪುರಂದರ ವಿಠಲನ
ಉಬ್ಬುಬ್ಬಿ ಮದುವ್ಯಾದೆ ಉತ್ಸಾಹದಿಂದ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಪುರಂದರ ದಾಸರ ನಿಂದಾಸ್ತುತಿಯ ವಿನೋದವನ್ನು ಈ ಹಾಡಿನಲ್ಲಿ ನೋಡಬಹುದು.

**ಹಾವಿನ ಮೇಲೆ...** – ಆದಿಶೇಷನ ಮೇಲೆ ಮಲಗಿದವನು.

**ಕರಡಿಯ ಕೂಡಿದ** – ಜಾಂಬವತಿಯನ್ನು ಮದುವೆಯಾದವನು.

**ತೊತ್ತಿನ ಮಗನ ಮನೆಯಲಿ** – ದಾಸೀ ಪುತ್ರನಾದ ವಿದುರ. ವಿಚಿತ್ರವೀರ್ಯನ ಹೆಂಡತಿ ಅಂಬಿಕೆಯ ಊಳಿಗದವಳ ಮಗ. ಕೃಷ್ಣನು ಪಾಂಡವರ ರಾಯಭಾರಿಯಾಗಿ ಹಸ್ತಿನಾವತಿಗೆ ಬಂದಾಗ ಇವನ ಮನೆಯಲ್ಲೇ ಇಳಿದುಕೊಂಡು ಊಟ ಮಾಡಿದ ಪ್ರಸಂಗ ಮಹಾಭಾರತದ ಉದ್ಯೋಗಪರ್ವದಲ್ಲಿದೆ.

**ಮಾವನ** – ತನ್ನ ಸೋದರಮಾವನಾದ ಕಂಸನನ್ನು ಕೊಂದವನು.

**ಕುಂಡಗೋಳಕರ** – ಪಾಂಡವರು, ಗಂಡನಿರುವಾಗ ಜಾರತನಕ್ಕೆ ಹುಟ್ಟಿದ ಮಕ್ಕಳು ಕುಂಡರು ಮತ್ತು ಗಂಡ ಸತ್ತಮೇಲೆ ಹಡೆದ ಮಕ್ಕಳು ಗೋಳಕರು.

**ಅಮೃತೇಜಾರಜ: ಕುಂಡ: ಮೃತೇಭರ್ತರಿ ಗೋಲಕಂ ।**
**ಯಸ್ತಯೋರನ್ನಮಶ್ನಾತಿ ಕುಂಡಾಶೀತ್ಯಭಿಧೀಯತೇ ॥ (ದೇವಲಸ್ಮೃತಿ)**

**ಮಂಡೆಬೋಳರ** – ಸಂನ್ಯಾಸಿಗಳ.

**ಒಬ್ಬರಲ್ಲಿ ಹುಟ್ಟಿ ಒಬ್ಬರಲ್ಲಿ ಬೆಳೆದ** – ದೇವಕಿಯು ಕೃಷ್ಣನ ತಾಯಿ, ಆದರೆ ಕಂಸನ ಭಯದಿಂದ ಹುಟ್ಟಿದೊಡನೆ ವಸುದೇವನು ನಂದಗೋಪನ ಹೆಂಡತಿ ಯಶೋದೆಯ ಮನೆಗೊಯ್ದು ಅಲ್ಲಿ ಬಿಟ್ಟನಾಗಿ ಯಶೋದೆ ಕೃಷ್ಣನಿಗೆ ಸಾಕು ತಾಯಿಯಾದಳು.

**ಒಬ್ಬರಿಗೆ ಮಗನಲ್ಲ –** ದಿಟವಾಗಿ ಪರಮಾತ್ಮನಾದ ಅವನು ನಿತ್ಯ; ಅವನಿಂದಲೇ ಊಳಿದದ್ದೆಲ್ಲ ಒದಗಿ ಬಂದುದು. ಅವನಿಗೆ ಹುಟ್ಟೆಂಬುದೂ ಇಲ್ಲ, ಬೆಳವಣಿಗೆಯೂ ಇಲ್ಲ, ಕೊನೆಯೂ ಇಲ್ಲ. ಅವತಾರಗಳಲ್ಲಿ ಮಾತ್ರ ಮನುಷ್ಯನಾಗಿ ಕಾಣಿಸಿಕೊಂಡಾಗ ತಂದೆ ತಾಯಿಯರನ್ನು ಆರಿಸಿಕೊಳ್ಳುವನು.

**ಅಬ್ಬರದ –** ಸರ್ವವ್ಯಾಪಿ, ಸರ್ವಶಕ್ತ, ಸರ್ವನಿಯಾಮಕನಾಗಿ ಪ್ರಸಿದ್ಧನಾದವನು.

**Classification:** Keerthane
**Ankita:** purandara vittala
**Location:** NA
**Category:** Mahatmya Jnana, Dashavatara,
**Sub-Category:** Rukmini, Krishna, Gopala, hasige, uraga, karadi, vidura, dashavatara, mane, huttu, putra, maga, loka, deva, maduve, kamsa, pandavaru,
**Pravachana:** NA
**Explanation:** NA